ಹಜಾರದಿಂದ ಪೂರ್ವದ ಹೆಬ್ಬಾಗಿಲಿಗೆ ಗೋಡೆಯ ನಡುಮಧ್ಯೆಯಲ್ಲಿ ತೂಗಾಡುತ್ತಿದ್ದ ಬೆಳ್ಳಿಯ ತಗಡಿಗೆ ಕಟ್ಟುಹಾಕಿದ್ದ ಯಂತ್ರವೊಂದನ್ನು ಸೂಕ್ಷ್ಮವಾಗಿ ಗಮನಿಸಿದ ರಾಮಚಂದ್ರನಿಗೆ ಅದರಲ್ಲಿ ಬರೆದದ್ದೇನೆಂದು ಸ್ಪಷ್ಟ ಅರಿವಾಗಲಿಲ್ಲ. ಅಷ್ಟಮೂಲೆಯ ಆಕೃತಿಯಂಥದ್ದು ಕಾಣಿಸಿತು. ಹತ್ತಿರ ಹೋಗಿ ಕಣ್ಣು ಕೀಲಿಸಿ ನೋಡಿದರೂ ಅಲ್ಲಿದ್ದ ಅಕ್ಷರಗಳು ಕಾಣಿಸಲಿಲ್ಲ. ಅಲ್ಲೇ ಇದ್ದ ಕುರ್ಚಿಯಲ್ಲಿ ಕುಳಿತಿದ್ದ ಪಾಂಡುವನ್ನು ಕುರಿತು, 'ಮಾಮ... ಅದೇನು ಬರೆದಿದೆ ಓದು... ಸರ್‌ಯಾಗಿ ಕಾಣಿಸ್ತಾ ಇಲ್ಲ' ಎಂದ. 'ಅದಾ... ವಾ... ನಿಂಗ್ ನಾನು ಹೇಳಿಕೊಡಲಿಲ್ಲ ಅಲ್ವಾ... ಅದರಲ್ಲಿ ಬರ್ದಿರಾದು ದಿನಾ ಇಪ್ಪತ್ತೊಂದು ಸಾರಿ ಹೇಳಿದ್ರೆ ಮನೆಗೇನು ತೊಂದ್ರೆಯಿರಲ್ಲ, ಗ್ಯಾರಂಟಿಯಾಗಿ. ಕೇಳಿಸ್ಕೋ– 'ಗಣಪದ್ಯೋ ದಯೋಲೋಕೋದೇವಾ ದಿಕ್ಪಾಲಕಾಸ್ಥತಾ... ಸಾಯುಧುಹಃ ಸುಗುಣೋಪೇತಾಹಃ ಶುದ್ಧಂ ಕುರ್ವಂತಿ ಮೇ ಗೃಹಂ' ಅಂತ' ಎಂದ ಪಾಂಡುವಿನ ಮುಖವನ್ನೇ ನಿರುಕಿಸಿ ನೋಡಿ ರಾಮಚಂದ್ರ, 'ಮಾಮ, ಇದು ನಿಮ್ಮನೇಲೂ ಇತ್ತ?' ಎಂದ ಕೌತುಕದಿಂದ. 'ಇತ್ತು ರಾಮಣ್ಣ, ನಮ್ಮನೇಂದ್ಲೆ ಇಲ್ಗೆ ಎತ್ಕೊಂಬಂದೆ. ನಾನು ಹ್ಯಾಗೂ ಇಲ್ಲೇ ಬಂದ್ನಲ್ಲ' ಎಂದಾಗ ಮನಸ್ಸಿನಲ್ಲಿ ಕೆಂಜಿಗ ಕಡಿಸಿಕೊಂಡಂತಾದ ರಾಮಚಂದ್ರ ತನ್ನ ಯಾವುದೇ ಭಾವವನ್ನು ಹೊರಸೂಸದಂತೆ ನಿಗ್ರಹಿಸಿಕೊಂಡ. ಅವನು ಹಾಗೆ ಮಾಡಲು ಅಲ್ಲೇ ಹಜಾರದ ನಾಗಾಲಿಯಲ್ಲಿ ಕುಳಿತು ಕಾಲಿಗೆ ಎಣ್ಣೆ ನೀವಿಕೊಳ್ಳುತ್ತಿದ್ದ ಅಮ್ಮ ಶಾರಕ್ಕ ಒಂದು ಕಾರಣವಾದರೆ ತನಗಿಂತ ಒಂದೆರಡು ವರ್ಷಗಳಷ್ಟೇ ದೊಡ್ಡವನಾದ ತನ್ನ ಮಾವನೆಂದರೆ ವಿಶೇಷ ಪ್ರೀತಿಯಲ್ಲದಿದ್ದರೂ ಮಕ್ಕಳು ಮರಿಯಿಲ್ಲದ ತನ್ನ ಸೋದರ ಮಾವನ ಹೊಲ ಮನೆಗಳು ಯಾವತ್ತೂ ತನಗೇ ಬರುತ್ತವೆಂಬ ಕಾರಣವೂ ಪ್ರಮುಖವಾಗಿತ್ತು. ತನ್ನ ಒಬ್ಬನೇ ಮಗ ನಾಗರಾಜನಿಗೆ ತನ್ನ ತೋಟ, ಮನೆ, ಅಂಗಡಿಗಳಲ್ಲಿ ಹಳ್ಳಿಯ ಹಿರೀಕರ ಆಸ್ತಿಯೂ ಕೂಡಿಕೊಂಡರೆ ವಜನಾದ ಕಡೆಯಿಂದ ಹೆಣ್ಣು ತರಬಹುದೆನ್ನುವ ಲೋಭವೇ ಎಲ್ಲಕ್ಕಿಂತ ಮುಖ್ಯವಾಗಿತ್ತು. ಸದಾ ಖಾಲಿಯಾಗಿದ್ದ ನೀಲಿ ಬಣ್ಣದ ನಡುಗೋಡೆಯಲ್ಲಿ ಈ ಬೆಳ್ಳಿಪಟ ತೂಗುತ್ತಿರುವುದು ಮೊದಲಿಗೆ ರಾಮಣ್ಣನಿಗೆ ಸರಿಕಾಣಲಿಲ್ಲ. ರಾಮಣ್ಣನಿಗೆ ಗೋಡೆಗಳು ಸಾಫಾಗಿ, ಯಾವ ಚಿತ್ರ ಚಿತ್ತಾರಗಳಿಲ್ಲದೆ ಇರುವುದೇ ಇಷ್ಟ. ಹಾಗೆಂದು ಇದೇನು ಅವನು ಕಟ್ಟಿಸಿದ ಮನೆಯಲ್ಲ. ಟಿ. ನರಸೀಪುರದ ಹತ್ತಿರದ ಹಳ್ಳಿಯಲ್ಲಿ ಒಕ್ಕಲಾಗಿದ್ದ ರಾಮಣ್ಣನ ಕುಟುಂಬ ಉಚ್ಛ್ರಾಯದ ಸ್ಥಿತಿ ಕಂಡಿದ್ದೇ ರಾಮಣ್ಣನ ಕಾಲದಲ್ಲಿ. ಕೃಷಿಯನ್ನು ಮಾತ್ರ ನಂಬಿ ಬದುಕಿದ್ದ ರಾಮಣ್ಣನ ಮನೆತನ ಪ್ರವರ್ಧಮಾನಕ್ಕೆ ಬಂದಿದ್ದೆ ರಾಮಣ್ಣ ವ್ಯಾಪಾರ ಮಾಡಲು ಶುರು ಮಾಡಿದಾಗ. ರಾಮಣ್ಣನಿಗೆ ಹತ್ತೊಂಬತ್ತು ವರ್ಷ ಆಗುತ್ತಿದ್ದಂತೆ ಎಲ್ಲದರಲ್ಲೂ ನಪಾಸಾಗುವಾಗ, 'ವಿದ್ಯೆ ಮುಂಡೇದರ ಹಣೇಲಿ ಬರೆದಿಲ್ಲ, ವ್ಯವಸಾಯ ಮಾಡ್ಲಿ' ಅಂತ ಅವನಪ್ಪ ಇದ್ದ ಅಲ್ಪ ಜಮೀನಿನ ಸಾಗುವಳಿಯನ್ನು ಅವನಿಗೆ ಹಚ್ಚಿದಾಗ ಅವನ ವಯಸ್ಸು ಕೇವಲ ಹತ್ತೊಂಬತ್ತು. ಸಾಗುವಳಿಯ ಎಲ್ಲ ಮರ್ಮಗಳನ್ನು ಲೀಲಾಜಾಲವಾಗಿ ಕಲಿಯತೊಡಗಿದ ರಾಮಣ್ಣ ತಿರುಮಕೂಡಲಲ್ಲಿ ಗೊಬ್ಬರದಂಗಡಿ ತೆಗೆದು ವ್ಯಾಪಾರ ಶುರುಮಾಡಿ ಅದು ಊರ್ಜಿತವಾದಾಗ, ಅಂಗಡಿ ಮಳಿಗೆಗೆ ಸೇರಿದಂತಿದ್ದ ಮನೆಯನ್ನು ಬಾಡಿಗೆ ಪಡೆದ. ಬೆಂಗಳೂರಿನಲ್ಲಿದ್ದ ಮನೆ ಮಾಲೀಕರು



